ಗಂಜಮಾಗಡಿ ಜಲಾನಯನ ಪ್ರದೇಶವನ್ನು ಅಭಿವೃದ್ಧಿ ಪಡಿಸುವ ಬಗ್ಗೆ

೬೭೪. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ),—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೋಣ ಹಾಗೂ ಗದಗ ತಾಲ್ಲೂಕಿನಲ್ಲಿ ಹರಿಯುತ್ತಿರುವ ಗಂಜಮಾಗಡಿ ಹತ್ತಿರದ ಹಿರೇ ಹಳ್ಳ ಪ್ರದೇಶದ ಜಲಾನಯನ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸರ್ಕಾರಕ್ಕೆ ಮನವಿ ಬಂದಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಗುಜಮಾಗಡಿ ಜಲಾನಯನ ಪ್ರದೇಶಾಭಿವೃದ್ಧಿ ಯೋಜನೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು ?

ಇ) ಈ ಯೋಜನೆಯ ರೂಪರೇಷೆಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಮನವಿ ಬಂದಿರುವುದು.

ಆ) ಪೂರ್ವಭಾವಿ ಸಮೀಕ್ಷೆ ತೆಗೆದುಕೊಂಡು ಈ ಪ್ರದೇಶದ ಅಭಿವೃದ್ಧಿಯನ್ನು ಡಿಪಿಎಪಿ ಮತ್ತು ಎನ್‌ಆರ್‌ಇಪಿ ಯೋಜನೆಗಳಲ್ಲಿ ಕಾರ್ಯಗತ ಮಾಡಲು ಪ್ರಯತ್ನಿಸಲಾಗುವುದು.

ಇ) ಭೂ ಸಂರಕ್ಷಣೆ, ಗಿಡಮರಗಳನ್ನು ಬೆಳಯುವುದು, ಬೆಳ ಯೋಜನೆ, ಇತ್ಯಾದಿಗಳನ್ನು ಜಲಾನಯನ ಆಧಾರದ ಮೇಲೆ ತೆಗೆದುಕೊಳ್ಳಲಾಗುವುದು.

ಗಂಗಾಕಲ್ಯಾಣ ಯೋಜನೆಗಳನ್ನು ತೀವ್ರ ಕಾರ್ಯಗತಗೊಳಿಸುವ ಬಗ್ಗೆ

೬೭೫. ಶ್ರೀ ಜ್ಞಾನದೇವದೊಡ್ಡಮೇಟಿ (ರೋಣ),—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೋಣ ತಾಲ್ಲೂಕಿನಲ್ಲಿ ಮಂಜೂರಾಗಿರುವ ಗಂಗಾಕಲ್ಯಾಣ ಯೋಜನೆಗಳು ಎಷ್ಟು ?

ಆ) ಈ ಯೋಜನೆಗಳಲ್ಲಿ ಎಷ್ಟು ಯೋಜನೆಗಳು ಕಾರ್ಯಗತವಾಗಿವೆ ?

ಇ) ಕಾರ್ಯಗತವಾಗದಿರುವ ಯೋಜನೆಗಳನ್ನು ತೀವ್ರವಾಗಿ ಮುಗಿಸಲು ಸರಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಐದು.

ಆ) ನಾಲ್ಕು

ಇ) ಕಾರ್ಯಗತವಾಗದ ಒಂದು ಕೆಲಸ ನಿರುಪಯುಕ್ತ ಎಂದು ಕಂಡುಬಂದಿದೆ.

ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ತುಂಬುವ ಬಗ್ಗೆ

೬೭೬. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ),—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳೆಷ್ಟು ?

ಆ) ಖಾಲಿ ಇರುವ ಜಾಗಗಳಿಗೆ ಈಗ ಹಾಲಿ ಇರುವ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಶಿಕ್ಷಕರನ್ನು ತೆಗೆದುಕೊಳ್ಳಲಾಗುವುದೇ ?

ಇ) ಇಲ್ಲವಾದರೆ ನೇಮಕಾತಿಯನ್ನು ಯಾವಾಗ ಮಾಡಲಾಗುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಖಂಡಿತ

ಆ) ಖಾಲಿ ಇರುವ ಹುದ್ದೆಗಳಿಗೆ ಜಿಲ್ಲಾ ಆಯ್ಕೆಸಮಿತಿಗಳ ಮೂಲಕ ನೇರ ನೇಮಕಾತಿ ನಡೆಯುವಾಗ ಗುತ್ತಿಗೆ ಆಧಾರದ ಮೇಲಿನ ಅಭ್ಯರ್ಥಿಗಳೂ ಅರ್ಜಿ ಸಲ್ಲಿಸಿ ನಿಯಮಗಳ ಪ್ರಕಾರ ನೇಮಕಾತಿ ಹೊಂದಲು ಅವಕಾಶವಿದೆ.

ಇ) ಜಿಲ್ಲಾ ಆಯ್ಕೆ ಸಮಿತಿಗಳ ಮೂಲಕ ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳನ್ನು ತುಂಬಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಮುದ್ದೇನಹಳ್ಳಿಯಲ್ಲಿ ತಾಂತ್ರಿಕ ಮಹಾವಿದ್ಯಾಲಯ ಸ್ಥಾಪನೆ ಬಗ್ಗೆ

೬೮೩. ಶ್ರೀ ಕೆ. ಎಂ. ಮುನಿಯಪ್ಪ (ಚಿಕ್ಕಬಳ್ಳಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಶ್ವವಿಖ್ಯಾತ ಶಿಲ್ಪಿ ಸರ್ ಎಂ. ವಿಶ್ವೇಶ್ವರಯ್ಯನವರ ಹುಟ್ಟೂರಾದ ಮುದ್ದೇನಹಳ್ಳಿಯಲ್ಲಿ ತಾಂತ್ರಿಕ ಮಹಾವಿದ್ಯಾಲಯವನ್ನು ಸ್ಥಾಪಿಸುವ ಬಗ್ಗೆ ಸರ್ಕಾರದವರು ಉದ್ದೇಶಿಸಿರುವರೆ?

ಶ್ರೀ ಡಿ.ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಸಧ್ಯಕ್ಕೆ ಇಲ್ಲ.

Construction of Rangadhama Feeder Channel in Chikkaballapu Taluk

684. SRI K. M. MUNIYAPPA (Chikkaballapur).—

a) whether the construction of sluice channel to Rangadhama Tank in Chikkaballapur Taluk will be started this year only If so wh at programme has been chalked out ?

SRI H. D. DEVE GOWDA (The Minister for Public Works and Irrigation).—

a) The work of Rangadhama Feeder Channel is included in the Budget of 1986-87 and is under investigation Nece ssary action will be taken, if it is found to be technically and financially feasible.

ಶಾಲಾ ಕಟ್ಟಡಗಳ ದುರಸ್ತಿ ಬಗ್ಗೆ

೬೮೪. ಶ್ರೀಮತಿ ಸುಮಾ ವಸಂತ.—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಶಾಲಾ ಕಟ್ಟಡಗಳಿಗೆ ಮತ್ತು ದುರಸ್ತಿಗಾಗಿ ೧೯೮೪-೮೫, ೧೯೮೫-೮೬, ೧೯೮೬-೮೭ರಲ್ಲಿ ಮಂಜೂರಾದ ಹಣವೆಷ್ಟು ?

ಆ) ಆ ಪೈಕಿ ಕೊಡಗು ಜಿಲ್ಲೆಯ ಶಾಲಾ ಕಟ್ಟಡಗಳ ದುರಸ್ತಿಗಾಗಿ ಬಿಡುಗಡೆ ಮಾಡಿದ ಹಣ ವೆಷ್ಟು ? (ತಾಲೋಕುವಾರು ಮಾಹಿತಿ ನೀಡುವುದು)

ಇ) ವೀರಾಜಪೇಟೆ ಕ್ಷೇತ್ರದಲ್ಲಿ ಎಷ್ಟು ಹೊಸ ಶಾಲೆ ಕಟ್ಟಡ ಹಾಗೂ ಕಟ್ಟಡ ದುರಸ್ತಿಗಳು ಎಲ್ಲೆಲ್ಲಿ ಯಾವಾಗ ಆಗಿದೆ ?